ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು - 1**

ಸಂಖ್ಯೆ: ಯೋ8/ಶಾಲಾ ಮೂ.ಭೂ. ಸೌಕರ್ಯ/01/2019–20 ದಿನಾಂಕ: 10/12/2019

**: ಸುತ್ತೋಲೆ :**

ವಿಷಯ: ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಸ್ಥಳೀಯ ಸಮುದಾಯ, ಸಂಘ ಸಂಸ್ಥೆಗಳ ಸಹಕಾರ ಮತ್ತು ಪಾಲ್ಗೊಳ್ಳುವಿಕೆಯ ಮೂಲಕ ಶಾಲಾ ಮೂಲಭೂತ ಸೌಲಭ್ಯಗಳನ್ನು ಪಡೆಯುವ ಬಗ್ಗೆ:

---*****---

ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕಡ್ಡಾಯವಾಗಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸುವ ಬಗ್ಗೆ ಮತ್ತು ಈ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಈಗಾಗಲೇ ತಿಳಿಸಲಾಗಿದೆ. ಶಾಲಾಭಿವೃದ್ಧಿಯಲ್ಲಿ ಸ್ಥಳೀಯ ಜನಪ್ರತಿನಿಧಿಗಳ, ಸಂಘ–ಸಂಸ್ಥೆ, ಹಳೆಯ ವಿದ್ಯಾರ್ಥಿಗಳ, ಉದ್ದಿಮೆದಾರರ, ಗಣ್ಯರ ಅನುಭವ ಮತ್ತು ಸೇವೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದರ ಮೂಲಕ ಸರ್ಕಾರಿ ಶಾಲೆಗಳು ಎಲ್ಲಾ ಮೂಲಭೂತ ಸೌಲಭ್ಯಗಳೊಂದಿಗೆ ಪ್ರಭಲವಾಗಿ ಬೆಳೆಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕೆಳಕಂಡ ಕ್ರಮಗಳನ್ನು ಪ್ರತೀ ಶಾಲಾಹಂತದಲ್ಲಿ ಕೈಗೊಳ್ಳಲು ತಿಳಿಸಿದೆ.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಬೈಲಾ ಪ್ರಕಾರ ನಡೆಯುವ ಸಭೆಯನ್ನು ಹೊರತುಪಡಿಸಿ ಪ್ರತೀ ಶಾಲೆಯಲ್ಲಿ ವರ್ಷಕ್ಕೆ ಎರಡು ಬಾರಿ ಸಮುದಾಯದ ಸಭೆ ನಡೆಸಬೇಕು. ಈ ಸಭೆಗೆ ಸ್ಥಳೀಯ ಜನಪ್ರತಿನಿಧಿಗಳನ್ನು, ಟ್ರಸ್ಟ್, ಸಂಘ–ಸಂಸ್ಥೆಗಳ ಮುಖ್ಯಸ್ಥರನ್ನು, ದಾನಿಗಳನ್ನು ಊರಿನ ಗಣ್ಯರನ್ನು, ಉದ್ದಿಮೆದಾರರನ್ನು, ಇತರೆ ಶಿಕ್ಷಣಾಸಕ್ತರ ಸಭೆಯನ್ನು ಕರೆಯಬೇಕು, ಈ ಸಭೆಯು ಪೂರ್ವ ಯೋಜಿತವಾಗಿರಬೇಕು. ಈ ಸಭೆಯಲ್ಲಿ ಅನುಕ್ರಮವಾಗಿ:

1. ಶಾಲೆಯು ಬೆಳೆದು ಬಂದ ಹಿನ್ನೆಲೆ, ವಿದ್ಯಾರ್ಥಿಗಳ ಶಿಕ್ಷಕರ ವಿಶೇಷ ಸಾಧನೆಗಳು, ಕಾರ್ಯಕ್ರಮಗಳ ಅನುಷ್ಠಾನ ಇತ್ಯಾದಿ ಒಟ್ಟಾರೆ ಸಾಧನೆಗಳ ವಿವರಗಳನ್ನು ಸಭೆಗೆ ಪ್ರಸ್ತುತಪಡಿಸಬೇಕು.
2. ಶಾಲೆಯ ಸಮಸ್ಯೆಗಳ ಬಗ್ಗೆ ಉದಾ: ಶಾಲೆಯಿಂದ ಹೊರಗುಳಿದ ಮಕ್ಕಳ, ಆಗಿಂದಾಗ್ಗೆ ಗೈರು ಹಾಜರಾಗುವ ಮಕ್ಕಳ ಬಗ್ಗೆ, ಮೂಲಭೂತ ಅವಶ್ಯಕತೆಗಳಾದ ನೀರು, ಶೌಚಾಲಯ, ಸ್ವಚ್ಚತೆ, ಶಾಲಾ ಆಸ್ತಿ ರಕ್ಷಣೆ, ಬೋಧನೋಪಕರಣಗಳು, ಶಾಲಾ ಸೌಂಧರ್ಯ ತಂತ್ರಜ್ಞಾನದ ಬಳಕೆ, ಪೀಠೋಪಕರಣ, ಕೊಠಡಿಗಳ ಸುಸ್ಥಿತಿ ಇತ್ಯಾದಿಗಳ ಬಗ್ಗೆ ಸದರಿ ಸಭೆಯಲ್ಲಿ ಚರ್ಚಿಸುವುದು.
3. ಚರ್ಚಿಸಿ ಸದರಿ ಸಮಸ್ಯೆಗಳಿಗೆ ಸರ್ಕಾರದ ಅನುದಾನದ ಜೊತೆಗೆ ಊರಿನ ದಾನಿಗಳು, ಗಣ್ಯರು, ಸಂಘ–ಸಂಸ್ಥೆಗಳು, ಟ್ರಸ್ಟ್, ಉದ್ದಿಮೆದಾರರು, ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ, ಬ್ಯಾಂಕ್. ಹಳೆಯ ವಿದ್ಯಾರ್ಥಿಗಳು, ದತ್ತಿನಿಧಿ, ಇತ್ಯಾದಿಗಳ ಮೂಲಕ ಸಂಪನ್ಮೂಲ ಕ್ರೋಢೀಕರಿಸಿ ಎಲ್ಲ ಸಮಸ್ಯೆಗಳಿಗೆ ಸದರಿ ಸಭೆಯಲ್ಲಿ ಪರಿಹಾರ ಕಂಡುಕೊಳ್ಳಬೇಕು.

4. ಶಾಲಾ ಏಳಿಗೆಗೆ ಮುಂದೆ ಬರುವವರನ್ನು ಪ್ರೋತ್ಸಾಹಿಸಿ ಗೌರವಿಸಬೇಕು.
5. ಆರ್ಥಿಕ ವ್ಯವಹಾರದಲ್ಲಿ ಪಾರದರ್ಶಕತೆ ಕಾಪಾಡುವುದು.
6. ಈ ಸಮುದಾಯದ ಸಭೆಗೆ ಇಲಾಖಾ ಪ್ರತಿನಿಧಿಗಳಾಗಿ ಕ್ಷೇತ್ರಶಿಕ್ಷಣಾಧಿಕಾರಿ /ಕ್ಷೇತ್ರಸಂಪನ್ಮೂಲ ಸಮನ್ವಯಾಧಿಕಾರಿ/ಸಹಾಯಕ ನಿರ್ದೇಶಕರು-ಅಕ್ಷರ ದಾಸೋಹ/ಬ್ಲಾಕ್ ಸಂಪನ್ಮೂಲ ವ್ಯಕ್ತಿ/ಶಿಕ್ಷಣ ಸಂಯೋಜಕರು/ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಇವರುಗಳಲ್ಲಿ ಒಬ್ಬರು ಕಡ್ಡಾಯವಾಗಿ ಹಾಜರಿರಬೇಕು.

ಒಟ್ಟಾರೆ ಸಮುದಾಯದ ಪಾಲ್ಗೊಳ್ಳುವಿಕೆ ಮೂಲಕ ಶಾಲೆಯ ಮೂಲಭೂತ ಸೌಲಭ್ಯಗಳು / ಚಟುವಟಿಕೆಗಳು ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಗೆ ಪ್ರೋತ್ಸಾಹಕವಾಗಿರಬೇಕು ಮತ್ತು ಶಾಲೆಯು ಶೈಕ್ಷಣಿಕವಾಗಿ ಆಕರ್ಷಕ ಕೇಂದ್ರವಾಗಿ ಮೂಡಿಬರಬೇಕೆಂಬುದೇ ಇದರ ಸದುದ್ದೇಶವಾಗಿದೆ.

ಈ ಸಂಬಂಧ ಸುತ್ತೋಲೆಯನ್ನು ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ ಕಡ್ಡಾಯವಾಗಿ ಕಳುಹಿಸುವ ವ್ಯವಸ್ಥೆಯನ್ನು ಉಪನಿರ್ದೇಶಕರುಗಳು ಆಯಾ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳ ಮೂಲಕ ಮಾಡಲು ತಿಳಿಸಿದೆ.

(ಡಾ|| ಕೆ.ಜಿ. ಜಗದೀಶ) ಭಾ.ಆ.ಸೇ
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ.

ಇವರುಗಳಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ,
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ,
3. ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ ಅಗತ್ಯ ಕ್ರಮಕ್ಕಾಗಿ.